ಶ್ರೀ ಟಿ. ಮಾದಯ್ಯಗೌಡ.—ಬೆಂಗಳೂರು ಜಿಲ್ಲೆಯಲ್ಲಿ ನುರಿತ ಉಪಾಧ್ಯಾಯರಿಲ್ಲ; ಸರಿಯಾದ ಸಾಮಾನಿಲ್ಲ, ಸಾಕಷ್ಟು ಉಪಾಧ್ಯಾಯರುಗಳಿಲ್ಲ. ಮಕ್ಕಳ ಸಂಖ್ಯೆ ಹೆಚ್ಚಾಗಿರುವಾಗ ಇವರ ವಿದ್ಯಾಭ್ಯಾಸ ಯಾವ ರೀತಿ ಆಗುವುದೆಂಬುದನ್ನು ಹೇಳುತ್ತೀರಾ ?

Sri S. R. KANTHI.—Sir, the Hon'ble Member knows many more things. In our State there are thousands of single teachers schools. Government is evolving a method to see whether one teacher can manage. We had a Seminar also in Bangalore and certain methods are being evolved.

ಶ್ರೀ ಕೆ. ಪಿ. ರೇವಣ್ಣಸಿದ್ಧಪ್ಪ.—ಉಪಾಧ್ಯಾಯರು, ಉಪಕರಣ ಮತ್ತು ಕಟ್ಟಡಗಳಿಲ್ಲದೆ ಹೇಗೆ ಕಡ್ಡಾಯ ಶಿಕ್ಷಣವನ್ನು ಜಾರಿಗೆ ತರುತ್ತೀರಿ ?

ಶ್ರೀ ಎಸ್. ಆರ್. ಕಂಠಿ.—ಹುಡುಗರನ್ನು ಶಾಲೆಗೆ ಕಳುಹಿಸುವುದು ಜಾಗಾ ಕೊಡುವುದು ಊರಿನವರ ಜವಾಬ್ದಾರಿ, ಕಟ್ಟಡವನ್ನು ಕೊಡತಕ್ಕದ್ದು ಸರ್ಕಾರದವರ ಜವಾಬ್ದಾರಿ.

ಶ್ರೀ ಎಸ್. ಎಂ. ಗುರೆಡ್ಡಿ.—ಒಂದು ಸಾವಿರ ರೂಪಾಯಿಗಳ ಸಾಲವನ್ನು ಮುಂದೆ ಕೊಡುತ್ತೀರೋ ಅಥವಾ ನಿಲ್ಲಿಸುತ್ತೀರೋ ?

ಶ್ರೀ ಎಸ್. ಆರ್. ಕಂಠಿ.—ತಾಲ್ಲೂಕ್ ಬೋರ್ಡಿನವರು ಕೊಡುತ್ತಾರೆ.

ಶ್ರೀ ಚೆನ್ನಪ್ಪ ಪಾಲಿ.—ಎಷ್ಟು ಜನ ಉಪಾಧ್ಯಾಯರು ಟ್ರೈನಿಂಗಿಗೆ ಹೋಗುವುದಿಲ್ಲ ಎಂದು ಸರ್ಕಾರದವರಿಗೆ ತಿಳಿಸಿದ್ದಾರೆ ?

ಶ್ರೀ ಎಸ್. ಆರ್. ಕಂಠಿ.—ಬಹಳ ಕಡಮೆ ಜನ. 1-2 ಪರ್ಸೆಂಟಿರಬಹುದು.

ಶ್ರೀ ಸಂಜೀವನಾಥ ಐಕಳ.—ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲಾ ಇನ್‌ಸ್ಪೆಕ್ಟರು ನರಿಯಾಗಿ ನಿರ್ದಾಕ್ಷಿಣ್ಯವಾಗಿ ಇನ್‌ಸ್ಪೆಕ್ಷನ್ ಮಾಡುತ್ತಿಲ್ಲ. ಇದನ್ನು ತಾವು ಒಪ್ಪುತ್ತೀರಾ ?

ಒಬ್ಬ ಮಾನ್ಯ ಸದಸ್ಯರು.—ಈಗ ಕೊಡತಕ್ಕ ಒಂದು ಸಾವಿರ ರೂಪಾಯಿಗಳು ಕಟ್ಟಡಕ್ಕೆ ಸಾಕಾಗುವುದಿಲ್ಲವಾದ್ದರಿಂದ ಈ ಕಟ್ಟಡಗಳ ಡಿಸೈನನ್ನು ಬದಲಾಯಿಸಲು ಒಪ್ಪಿಗೆ ಕೊಡುತ್ತೀರಾ ?

ಶ್ರೀ ಎಸ್. ಆರ್. ಕಂಠಿ.—ಕೊಡುತ್ತೇನೆ.

ಶ್ರೀ ಅಂದಾನಯ್ಯ.—300 ಜನಸಂಖ್ಯೆ ಇರಬೇಕೆಂದರೆ ಕಡ್ಡಾಯ ಶಿಕ್ಷಣದ ನೀತಿ ಯೇನಾಗಬಹುದು ?

ಶ್ರೀ ಎಸ್. ಆರ್. ಕಂಠಿ.—300 ಜನಸಂಖ್ಯೆ ಇದ್ದರೆ ಕೊಡುತ್ತೇವೆಂದು ಹೇಳಿದ್ದೇನೆ.

Establishment of Lepers' Colony at Gulbarga.

*Q.—259. Sri GANGADHAR NAMOSHI (Gulbarga).—

Will the Government be pleased to state :—

(*a*) whether they had approved a scheme for a Lepers' Colony at Gulbarga ;

(*b*) if so, whether they have taken any action to establish the Colony and if not, why ;

(*c*) whether it is not a fact that the lepers have settled down in the heart of Gulbarga City ;

(*d*) whether there was any public representation for isolating them, and if so, the atcion taken thereon ;

(*e*) whether they are aware that these lepers are dealing with the business of selling edibles and vegetables to the public ?

A.—Sri K. NAGAPPA ALVA (Minister for Health).—

(*a*) No.
(*b*) Does not arise.
(*c*) Yes.
(*d*) Yes.

The question of shifting the present Colony to outside the City was recommended to the City Municipality, Gulbarga.

(*e*) No.

ಶ್ರೀ ಗಂಗಾಧರ ನಾವೋಷಿ.—(ಎ) ಗೆ ಉತ್ತರವಾಗಿ ಇಲ್ಲ ಎಂದು ಹೇಳಿದ್ದೀರಿ. ಅಲ್ಲಿ ಡಿವಿಜನಲ್ ಕಮೀಷನರು 10 ಸಾವಿರ ರೂಪಾಯಿಗಳನ್ನು ಕೊಟ್ಟರೆ ಇದನ್ನು ಬದಲಾವಣೆ ಮಾಡಲಾವಣೆ ಎಂದು ಹೇಳುತ್ತಿದ್ದಾರೆ. ಇದರಲ್ಲಿ ಯಾವುದು ನಿಜ ?

ಶ್ರೀ ಕೆ. ನಾಗಪ್ಪ ಆಳ್ವ.—ಇಲ್ಲಿ ನಾವು ಹೇಳುವುದು ನಿಜ. ಮೊದಲು ಹೊಸ ಕಾಲೋನಿ ಮಾಡತಕ್ಕ ಬಗ್ಗೆ 75 ಸಾವಿರ ರೂಪಾಯಿಗಳ ಎಸ್ಟಿಮೇಟನ್ನು ತಯಾರಿಸಲಾಗಿತ್ತು. ಆಗ ಅಲ್ಲಿಯ ಮುನಿಸಿಪಾಲಿಟಿಯವರು 3 ಸಾವಿರ ರೂಪಾಯಿಗಳನ್ನು ಕೊಡಲು ಮಾತ್ರ ಸಾಧ್ಯವಿದೆಯೆಂದು ಹೇಳಿದರು. ಆಗ ಅದನ್ನು ಅಷ್ಟಕ್ಕೇ ನಿಲ್ಲಿಸಿ ಬೇರೆ ಪ್ರಪೋಜರ್ಸ್ ಕೇಳಿದ್ದೇವೆ.

12-30 P.M.

Sri SIDDAIAH KASHIMATH.—You have stated in answer to (c) that the lepers have settled down in the heart of Gulbarga City. What action has Government taken now to shift them from the heart of Gulbarga City ?

Sri K. NAGAPPA ALVA.—That is why I said that there was a proposal to shift them, on the recommendation of the Health Department as well as other officers, to a distance of about 2 miles from a place called Korgumbuz in Gulbarga—Aland Road and to that proposal, the municipality has not agreed. It is generally the responsibility of the Local Self Government and the Social Service Organisations and the public to make arrangements for these things.

Sri R. PID NAIK.—May I know whether a leprosy control clinic will be established in Gulbarga District ?

Sri K. NAGAPPA ALVA.—There is already the National leprosy subsidiary centre at Gulbarga.

Sri J. P. SARWESH.—Is not leprosy a contagious disease ?

Sri K. NAGAPPA ALVA.—It is, but in the case of 30 per cent of the infected persons it is contagious.

ಶ್ರೀ ಸಿ. ಆರ್. ರಂಗೇಗೌಡ.—ಈ ಕುಷ್ಠರೋಗಿಗಳು ತಿಂಡಿ ಪದಾರ್ಥ ಹಾಗೂ ತರಕಾರಿಗಳನ್ನು ಸಾರ್ವಜನಿಕರಿಗೆ ಮಾರಾಟ ಮಾಡುವ ಉದ್ಯಮದಲ್ಲಿ ತೊಡಗಿರುವುದರಿಂದ ಮತ್ತು ಕೆಲವರು ಅಲ್ಲಿಗೆ ಬಂದವರು ಭಿಕ್ಷೆ ಬೇಡುವುದರಿಂದ ಈ ಕಾಯಿಲೆ ಹರಡುವುದಕ್ಕೆ ಅವಕಾಶವಿಲ್ಲವೇ ?

Sri K. NAGAPPA ALVA.—The question is hypothetical, because he is only thinking of the spreading of this disease. The Government is aware of it.

Sri D. PARAMESWARAPPA.—You admit that leprosy is a contagious disease. In that case, what preventive measures have been taken by your department?

Mr. SPEAKER.—This covers only the question of Gulbarga.

Sri D. PARAMESWARAPPA.—I am speaking about the measures taken to prevent the spreading of the disease.

Sri K. NAGAPPA ALVA.—There is arrangement for giving treatment for this disease and if almost all the cases are treated, they become burnt cases ; that means they are not infective.

Sri J. P. SARWESH.—Are the Government aware that even in serious cases, the persons infected are not admitted when they go to Dichpalli Hospital ?

Sri K. NAGAPPA ALVA.— With the limited number of beds, it is not possible to admit all the cases.

Sri R. N. LAKSHMIPATHI.—You have said that about 30 per cent of cases are infectious. What steps Government contemplate to take to stop infection ?

Sri K. NAGAPPA ALVA.—Wherever possible, they are advised and necessary arrangements are being made ; but at the same time, the best course of treatment now adopted and that has been accepted, is domicillary treatment by which we have made arrangements have been to distribute the drugs that are necessary. If the drugs are used for a short time, the disease becomes ineffective.

Sri C. J. MUCKANNAPPA.—Have you got a report about the number of people suffering from this disease in Gulbarga District ?

Sri K. NAGAPPA ALVA.—Preliminary survey has been made. I do not have the exact number here.

ಶ್ರೀ ಗೋಪಾಲರಾವ್ ಮುಡಬಿ.—ಈ ಜಿಲ್ಲೆಯ ಸುತ್ತಮುತ್ತಲಿರುವ ಹಳ್ಳಿಗಳಲ್ಲಿ ಈ ರೋಗ ವಿಶೇಷವಾಗಿ ಹಬ್ಬಿರುವುದರಿಂದ ಅದನ್ನು ಜಾಗ್ರತೆ ನಿವಾರಿಸಲು ಸಂಬಂಧಪಟ್ಟ ಇಲಾಖೆಯವರನ್ನು ಅಂತಹ ಸ್ಥಳಗಳಿಗೆ ಕಳುಹಿಸಿಕೊಡುವ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಕೆ. ನಾಗಪ್ಪ ಆಳ್ವ.—ಅದನ್ನು ಮಾಡುತ್ತೇವೆ.

ಶ್ರೀ ಗಂಗಾಧರ ನಾವೋಷಿ.—ಗುಲ್ಬರ್ಗ ಜಿಲ್ಲೆಯಲ್ಲಿ ಈ ರೋಗ ಬಹಳವಾಗಿ ಹಬ್ಬುತ್ತಿರುವುದರಿಂದ ಅಲ್ಲಿ ಕುಷ್ಠರೋಗಿಗಳ ವಸಾಹತನ್ನು ಕಟ್ಟಿ ಅದಷ್ಟು ಜಾಗ್ರತೆ ಈ ಅಂಟು ಜಾಡ್ಯವನ್ನು ಹೋಗಲಾಡಿಸಲು ತಕ್ಕ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೀರಾ ?

Sri NAGAPPA ALVA.—There is already a proposal and a scheme before the Government to set up what is called the decentralised leprosy hospital-cum-settlement unit at Gulbarga and the Government have accepted the scheme in principal. Because of the financial difficulties it has been delayed and we will take it up at the earliest time possible.

Sri SANJEEVANATH AIKALA.—Since the Government has got financial difficulties to take up the scheme, will it consider the advisability of approaching the Gandhi Memorial Leprosy Foundation.....

Mr. SPEAKER.—How does it become relevant here?

ಶ್ರೀ ಕೆ. ಎಸ್. ನೂರ್ಯನಾರಾಯಣ ರಾವ್.—ಡೊಮಿಸಿಲರಿ ಟ್ರೀಟ್‌ಮೆಂಟ್ ಮಾಡುವುದಕ್ಕೆ ಏರ್ಪಾಡು ಮಾಡಿದ್ದೇವೆಂದು ಹೇಳಿದ್ದೀರಿ. ಇದರ ಪ್ರಕಾರ ಗುಲ್ಬರ್ಗ ಜಿಲ್ಲೆಯಲ್ಲಿ ಎಷ್ಟು ಜನ ರೋಗಿಗಳಿಗೆ ಔಷಧಿ ಕೊಡಲಿಕ್ಕೆ ಏರ್ಪಾಡು ಮಾಡುದ್ದೀರಿ ?

ಶ್ರೀ ಕೆ. ನಾಗಪ್ಪ ಆಳ್ವ.—ಎಷ್ಟು ಜನರು ಅದರ ಪ್ರಯೋಜನ ಪಡೆಯಬಹುದೋ ಅವರಿಗೆ ಔಷಧಿ ಕೊಡುವುದಕ್ಕೆ ಏರ್ಪಾಡು ಮಾಡಿದ್ದೇವೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಗುಲ್ಬರ್ಗ ಮತ್ತು ಬಿದರೆ ಜಿಲ್ಲೆಗಳಿಗೋಸ್ಕರ ಮೊದಲು ಒಂದು ಇಂತಹ ಅಸ್ಪತ್ರೆ ಇತ್ತು. ಅದು ಗುಲ್ಬರ್ಗ ಮನ್ಯದಲ್ಲಿತ್ತು, ಅಂತಹ ವಸಾಹತನ್ನು ನಗರದ ಹೊರಕ್ಕೆ ಹಾಕುವುದಕ್ಕಾಗಿ ಸುಮಾರು 7 ಸಾವಿರ ರೂಪಾಯಿಗಳನ್ನು ಖರ್ಚುಮಾಡುವದು ನ್ಯಾಯವೇ ? ಇದರ ಬಗ್ಗೆ ಏನು ಕ್ರಮವನ್ನು ತೆಗೆದುಕೊಳ್ಳುತ್ತೀರಾ ?

Mr. SPEAKER.—It is disallowed.

ಶ್ರೀ ಬಿ. ನಂಜಪ್ಪ.—ಬೆಂಗಳೂರಿನಲ್ಲಿ ಇಂತಹ ಒಂದು ಅನ್ಯತ್ರೆಯನ್ನು ಕಟ್ಟುವುದಾಗಿ ಜಮೀನನ್ನು ಈಗಾಗಲೇ ಅಕ್ವೈರ್ ಮಾಡಿದ್ದಾರೆ. ಆ ಪ್ರೊಪೋಸಲ್ ಈಗ ಏನಾಗಿದೆ ?

Mr. SPEAKER.—The Hon'ble Member may put a separate question.

Villages that are not provided with Drinking Water Facilities in Muddebihal Taluk.

*Q.—311. Sri S. M. GUREDDI (Muddebihal).—

Will the Government be pleased to state :—

(*a*) the number of villages that are not provided with drinking water facilities in Muddebihal Taluk ;

(*b*) whether they have given direction to the Taluk Board to collect contribution from the people in this behalf and if so, at what rate ?

A.—Sri RAMAKRISHNA HEGDE (Minister for Development, Panchayat Raj and Co-operation).—

(*a*) 34.

(*b*) In respect of works under N. E. S. Scheme, the local body and the villagers together, are required to pay a contribution amounting to one-fourth of the total cost of the work.

Under L. D. Works programme, the share of the public, or public and local body is 50 per cent of the total cost of the work. It has however been decided to reduce the public contribution to 10 per cent generally in all backward areas.

ಶ್ರೀ ಎಸ್. ಎಂ. ಗುರಡ್ಡಿ.—ಈ ತಾಲ್ಲೂಕಿನ ಕೆಲವು ಗ್ರಾಮಗಳಲ್ಲಿ ಕುಡಿಯುವ ನೀರಿನ ಸೌಲಭ್ಯಗಳಿಲ್ಲ, ಇನ್ನು ಕೆಲವು ಗ್ರಾಮಗಳಲ್ಲಿ ಸಾಕಷ್ಟು ಕುಡಿಯುವ ನೀರಿನ ಬಾವಿಗಳಿವೆ. ಈ ತಾಲ್ಲೂಕು ಬಹಳ ಹಿಂದುಳಿದ ಪ್ರದೇಶವಾಗಿರುವುದರಿಂದ ಇಲ್ಲಿನ ಆ ಕಾಮಗಾರಿಯ ಖರ್ಚಿನ ಶೇಕಡ 10ರಷ್ಟು ಅಂಶದಾನವನ್ನು ಕಾಂಟ್ರಿಬ್ಯೂಷನ್ ರೂಪದಲ್ಲಿ ಗ್ರಾಮಸ್ಥರಿಂದ ವಸೂಲುಮಾಡುವುದಕ್ಕೆ ಸಾಧ್ಯವೇ ?

ಶ್ರೀ ರಾಮಕೃಷ್ಣ ಹೆಗ್ಗಡೆ.—34 ಹಳ್ಳಿಗಳ ಪೈಕಿ 22 ಹಳ್ಳಿಗಳಲ್ಲಿ ಈಗಾಗಲೇ ರಾಷ್ಟ್ರೀಯ ವಿಸ್ತರಣಾ ಯೋಜನೆಯ ಕಾರ್ಯಕ್ರಮಗಳ ಅಂಗವಾಗಿ ಬಾವಿ ಕೆಲಸ ನಡೆದಿದೆ. ಅದರ ಹೊರತು ಲೋಕಲ್ ಡೆವಲಪ್‌ಮೆಂಟ್ ಕಾಮಗಾರಿಗಳು 4 ಹಳ್ಳಿಗಳಲ್ಲಿ ನಡೆದಿವೆ. ಇನ್ನು 4 ಹಳ್ಳಿಗಳು ಕೃಷ್ಣಾನದಿಯಿಂದ ಸುಮಾರಿನಲ್ಲೇ ಇರುವುದರಿಂದ ಅವಕ್ಕೆ ನೀರಿನ ಅನಾನುಕೂಲತೆ ಅಷ್ಟು ತೀವ್ರವಿಲ್ಲ. ಇನ್ನುಳಿದ ಹಳ್ಳಿಗಳಲ್ಲಿ ಬಾವಿಗಳನ್ನು ತೆಗೆಯುವುದಕ್ಕೆ ಆದಷ್ಟು ಜಾಗ್ರತೆ ಪ್ರಯತ್ನ ಮಾಡುತ್ತೇವೆ.

ಶ್ರೀ ಎಸ್. ಎಂ. ಗುರಡ್ಡಿ.—ನನ್ನ ಪ್ರಶ್ನೆಗೆ ಉತ್ತರವಾಗಿ ಗ್ರಾಮಸ್ಥರು ಈ ಕಾಮಗಾರಿಗಾಗುವ ಒಟ್ಟು ವೆಚ್ಚದ ಶೇಕಡ 25 ಭಾಗದಷ್ಟು ಅಂಶದಾನವನ್ನು ಕಂಟ್ರಿಬ್ಯೂಷನ್ ರೂಪದಲ್ಲಿ ವಸೂಲು ಮಾಡಿ ಕೊಡಬೇಕಾಗುತ್ತದೆಂದು ಹೇಳಿದ್ದಾರೆ. ಇದರ ಬದಲು ಶೇಕಡ 10 ಭಾಗದಷ್ಟು ಅಂಶದಾನವನ್ನು ವಸೂಲು ಮಾಡಬೇಕೆಂದು ತಾಲ್ಲೂಕು ಬೋರ್ಡಿಗೆ ಆದೇಶವನ್ನು ಕಳುಹಿಸುತ್ತೀರಾ ?

ಶ್ರೀ ರಾಮಕೃಷ್ಣ ಹೆಗ್ಗಡೆ.—25 ರಿಂದ 10 ಮಾಡುವುದಕ್ಕೆ ಸಾಧ್ಯವಿಲ್ಲ. ಅದು ಕೇಂದ್ರ ಸರ್ಕಾರದಿಂದ ಬರತಕ್ಕ ಹಣ. ಖಾಸಗೀಯವರಿಂದ ಹಣ ಸ್ವಲ್ಪಮಟ್ಟಿಗೆ ಈ ಬಾವಿಗೆ ಕಾಂಟ್ರಿ